**Deposition Sheets (RP.No.57)**
**Form No.4 (Civil)**

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 1795/2023**

ಪಿಡ್ಯೂಃ 11 ಸಿಡ್ಲ್ಯೂಃ 25

ಸಾಕ್ಷಿದಾರನ ಹೆಸರು: ಒಡಿಯಪ್ಪ ಗೌಡ

ತಂದೆಯ ಹೆಸರು: ವಿರಪ್ಪ ಗೌಡ

ಪ್ರಾಯ: 61 ವರ್ಷ

ಉದ್ಯೋಗ: ನಿವೃತ್ತ ಪಿ ಎಸ್ ಐ

ವಾಸ : ಬೆಳ್ತಂಗಡಿ

ದಿನಾಂಕ 02.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು 2023 ಫೆಬ್ರವರಿ ಯಿಂದ 2023 ಜುಲೈ ರವರೆಗೆ ಕಾರ್ಕಳ ಗ್ರಾಮಾಂತ ಪೊಲೀಸ್ ಠಾಣೆಯಲ್ಲಿ ಉಪನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 05.06.2023 ರಂದು ಬೆಳಗಿನ ಜಾವ 3.00 ಗಂಟೆಗೆ ರಾತ್ರಿ ಠಾಣಾ ಪ್ರಭಾರದಲ್ಲಿದ್ದ ಮುಖ್ಯ ಪೇದೆ ಪ್ರಕಾಶ್ ರವರು ನಾನು ರಾತ್ರಿ ರೌಂಡ್ಸ್ ನಲ್ಲಿ ದೂಪದಕಟ್ಟೆ ಎಂಬಲ್ಲಿರುವಾಗ ಫೋನಿನಲ್ಲಿ ಸಂಪರ್ಕಿಸಿ ಬಜಗೋಳಿ ಸಮೀಪ ಮರಣಾಂತಿಕ ರಸ್ತೆ ಅಪಘಾತದ ಬಗ್ಗೆ ದೂರು ದಾಖಲಿಸಲು ಸಾರ್ವಜನಿಕರು ಬಂದ ಬಗ್ಗೆ ಮಾಹಿತಿಯನ್ನು ನೀಡಿದ್ದು ನಾನು ಬೆಳಗಿನ ಜಾವ 3.30 ಗಂಟೆಗೆ ಠಾಣೆಯನ್ನು ಸಂಪರ್ಕಿಸಿ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಅಕ್ರ ನಂ. 76/2023 ರಂತೆ ಪ್ರಕರಣವನ್ನು ದಾಖಲಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಇದೊಂದು ಘೋರ ಅಪರಾದ ಪ್ರಕರಣ ಆಗಿರುವುದರಿಂದ ಸದ್ರಿ ವಿಚಾರವನ್ನು ಪೊಲೀಸ್ ನಿರೀಕ್ಷಕರಿಗೆ ಮಾಹಿತಿಯನ್ನು ನೀಡಿದಾಗ ಅವರು ಪ್ರಕರಣದ ತನಿಖೆಯನ್ನು ಮುಂದುವರೆಸಲು ಮೌಖಿಕವಾಗಿ ಆದೇಶಿಸಿದ್ದರು.

2. ದಿಃ05.06.2023 ರಂದು ಬೆಳಿಗ್ಗೆ 9.00 ಗಂಟೆಗೆ ಕಾರ್ಕಳ ಸರಕಾರಿ ಆಸ್ಪತ್ರೆಯ ಶವಗಾರ ಕ್ಕೆ ತಲುಪಿ ಚಾಸಾ-10 ರಿಂದ 12 ರವರಿಗೆ ನೋಟಿಸು ಜಾರಿಗೊಳಿಸಿ ತದನಂತರ ಅವರ ಸಮಕ್ಷಮ 9.00 ರಿಂದ 11.00 ಗಂಟೆಯ ತನಕ ಶವಪಂಚನಾಮೆಯನ್ನು ದಾಖಲಿಸಿ

ನಿಗದಿ ಕೋರಿಕೆ ಪತ್ರಗಳನ್ನು ಭರ್ತಿಗೊಳಿಸಿ ಮುಡಾರು ಪ್ರಾಥಮಿಕ ಆರೋಗ್ಯ ವೈದ್ಯಾಧಿಕಾರಿಯವರಿಂದ ಮರಣೋತ್ತರ ಶವಪರೀಕ್ಷೆಯ ಬಗ್ಗೆ ನಿವೇದಿಸಿಕೊಂಡಿರುತ್ತೇನೆ. ತದನಂತರ ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ತಕ್ಷೀರು ಸ್ಥಳಕ್ಕೆ ತಲುಪಿ ಚಾಸಾ-1 ಹಾಗೂ ಚಾಸಾ-6 ಮತ್ತು 7 ರವರ ಸಮಕ್ಷಮ ಅಪರಾಹ್ನ 3.00 ರಿಂದ 4.00 ಗಂಟೆಯ ತಕ್ಷೀರು ಸ್ಥಳದ ಮಹಜರನ್ನು ದಾಖಲಿಸಿಕೊಂಡಿರುತ್ತೇನೆ. ತಕ್ಷೀರು ಸ್ಥಳದಲ್ಲಿ ಜಖಂಗೊಂಡ ಕೆಎ-20-ಇಜಿ-2612 ನೇ ನೊಂದಾಣಿ ಸಂಖ್ಯೆಯ ಮೋಟಾರು ಸೈಕಲ್ ಕಪ್ಪು ಬಣ್ಣದ ಹೆಲ್ಮೆಟ್ , ಮಡ್ ಗಾರ್ಡ್ ನ ಕಪ್ಪು ಬಣ್ಣದ ಪೈಬರ್ ತುಂಡುಗಳು , ಕೆಸರಿ ಬಣ್ಣದ ಗ್ಲಾಸ್ ಹಾಗೂ ಬಲ್ಬು ಇಲ್ಲದ ಇಂಡಿಕೇಟರ್ ನ ಭಾಗ ಇದ್ದು ಅದರಲ್ಲಿ ಬ್ಯಾಚ್ ಕೋಡ್ 06 ಜುಲೈ 2019 ಒ ಸಿ ಪಾಸ್ ಎಂದು ಬರೆದಿರುವ ಸ್ಟಿಕರ್ ಅಂಟಿಸಿರುವುದು ಕಂಡುಬಂದಿತ್ತು. ಅವುಗಳನ್ನು ಸ್ವಾಧೀನಪಡಿಸಿಕೊಂಡಿರುತ್ತೇನೆ. ತಕ್ಷೀರು ಸ್ಥಳದಲ್ಲಿ ಕರಡುನಕಾಶೆಯನ್ನು ಹಾಗೂ ಭಾವಚಿತ್ರವನ್ನು ತೆಗೆದಿರುತ್ತೇನೆ.

3. ತದನಂತರ ಈ ಪ್ರಕರಣದಲ್ಲಿ ವೃತ್ತ ನೀರಿಕ್ಷಕರು ನನಗೆ ನೀಡಿದ ಜ್ಞಾಪನ ಸಂ. 69 ಸಿ ಆರ್ ಎಂ /ಕೆ ಆರ್ ಪಿಸಿ 2023 ದಿ:05.06.2023 ರಂದು ಸ್ವೀಕರಿಸಿ ಸದ್ರಿ ಜ್ಞಾಪನಕ್ಕೆ ಸಂಬಂಧಿಸಿದಂತೆ ನಾನು ಠಾಣೆಯ ಸಿಬ್ಬಂದಿಗಳಾದ ಚಾಸಾ-22 ಮತ್ತು 23 ರವರನ್ನು ನೇಮಕ ಮಾಡಿ ಕಳುಹಿಸಿಕೊಟ್ಟಿರುತ್ತೇನೆ. ಆ ಬಳಿಕ ಈ ಪ್ರಕರಣದ ಕಡತವನ್ನು ಚಾಸಾ-26 ರವರಿಗೆ ಹಸ್ತಾಂತರಿಸಿರುತ್ತೇನೆ.

4. ಈಗ ನಾನು ನೋಡಿದ ನಿಪಿ- 1 ದೂರಿನಲ್ಲಿ ನನ್ನ ಸಹಿ ಇದೆ. ಸಾಕ್ಷಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನಾನು ದಾಖಲಿಸಿದ ಪ್ರಥವ ವರ್ತಮಾನ ವರದಿಯನ್ನು ನೋಡಿದ್ದು ಅದರಲ್ಲಿ ನನ್ನ ಸಹಿಯನ್ನು ಗುರುತಿಸಿದ್ದೇನೆ. ಸದ್ರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ-22 ಎಂದು, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ದಾಖಲೆ ಶವತನಿಖಾ ವರದಿಯಾಗಿದ್ದು ಅದರಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ದಾಖಲೆಯನ್ನು ನಿಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ದಾಖಲೆ ತಕ್ಷೀರು ಸ್ಥಳ ತನಿಖಾ ಮಹಜರು ಮತ್ತು ನಕಾಶೆ ಆಗಿದ್ದು, ಅದರಲ್ಲಿರುವ ನನ್ನ ಸಹಿಗಳನ್ನು ನೋಡಿ ಗುರುತಿಸಿದ್ದೇನೆ. ತಕ್ಷೀರು ಸ್ಥಳ ತನಿಖಾ ಮಹಜರು ಮತ್ತು ನಕಾಶೆ ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಗಳನ್ನು ನಿಪಿ-2(ಡಿ) ಮತ್ತು 3(ಡಿ) ಎಂದು

ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ನಿಪಿ-4 ಮತ್ತು 5 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದೇನೆ.ಈಗ ನಾನು ನೋಡಿದ ದಾಖಲೆ ದಿಃ05.06.2023 ರ ಜ್ಞಾಪನ ಪತ್ರವಾಗಿದ್ದು , ಅದರಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ದಾಖಲೆಯನ್ನು ನಿಪಿ-24 ಎಂದು, ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ದಾಖಲೆ ದಿಃ09.06.2023 ರ ಜ್ಞಾಪನ ಪತ್ರವಾಗಿದ್ದು, ಅದರಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ದಾಖಲೆಯನ್ನು ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರು ಸಮಯದಲ್ಲಿ ವಶಕ್ಕೆ ಪಡೆದುಕೊಂಡ ಮೋಟಾರು ಸೈಕಲ್ , ಹೆಲ್ಮೆಟ್ , ಇಂಡಿಕೇಟರ್, ಮಡ್ ಗಾರ್ಡ್ ನ ಭಾವಚಿತ್ರ ನಿಪಿ-6 ರಿಂದ 10 ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಬಿ ಎಸ್ ಎಸ್ ವಕೀಲರಿಂದ ಃ

5. ನಿಪಿ-1 ರಲ್ಲಿ ದಿನಾಂಕ ಮತ್ತು ಇಸವಿಗಳನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಅದರಲ್ಲಿ overwriting ಆಗಿದೆ. ಸದ್ರಿ ದಾಖಲೆಯಲ್ಲಿ ಯಾರು overwriting ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ-1 ರಲ್ಲಿ ಚಾಸಾ-1 ರವರ ಸಹಿ ಸದ್ರಿ overwriting ಮೇಲೆ ಕಂಡುಬರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ವಾಹನದ ನಂಬರನ್ನು ಬರೆದ ಲೈನ್ ನಲ್ಲಿ ಸ್ಥಳವಕಾಶ ಬಿಟ್ಟಿರುತ್ತಾರೆ ಎಂದರೆ ಅದು ಬೇರೆ ಲೈನ್ ಆಗಿರುತ್ತದೆ. ನಿಪಿ-1 ರಲ್ಲಿ ಮೃತಪಟ್ಟ ವ್ಯಕ್ತಿ ಯಾವ ಕಡೆಯಿಂದ ಯಾವ ಕಡೆಗೆ ಹೋಗುತ್ತಾರೆ ಎಂದು ನಮೂದು ಇಲ್ಲ ಎಂದರೆ ಸರಿ. ಚಾಸಾ-1 ರವರು ನನಗೆ ನಿಪಿ-1 ರಂತೆ ದೂರು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ನಾನು ವಿಮೆ ಪಡೆಯಲೆಂದು ಠಾಣೆಯಲ್ಲಿ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ.

6. ಘಟನಾ ಸ್ಥಳದಿಂದ ಪಂಚರಾದ ಚಾಸಾ-6 ಮತ್ತು 7 ರವರ ಮನೆ ಎಷ್ಟು ದೂರದಲ್ಲಿ ಇದೆ ಎಂದು ಗೊತ್ತಿಲ್ಲ. ಅವರನ್ನು ನಾನು ಕರೆಸಿರುವುದಿಲ್ಲ, ಅವರು ಘಟನಾ ಸ್ಥಳದಲ್ಲಿ ಇದ್ದರು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಿಪಿ-4 ರಲ್ಲಿ ತಕ್ಷೀರು ಸ್ಥಳದಲ್ಲಿ ಕಪ್ಪು ಬಣ್ಣದ ಹೆಲ್ಮೆಟ್ , ಮಡ್ ಗಾರ್ಡ್ ನ ಕಪ್ಪು ಬಣ್ಣದ ಫೈಬರ್ ತುಂಡುಗಳು , ಕೆಸರಿ ಬಣ್ಣದ ಗ್ಲಾಸ್ ಹಾಗೂ ಬಲ್ಬು ಇಲ್ಲದ ಇಂಡಿಕೇಟರ್ ನ ಭಾಗ ಇದ್ದು ಅದರಲ್ಲಿ ಬ್ಯಾಚ್ ಕೋಡ್ 06 ಜುಲೈ 2019 ಒ ಸಿ ಪಾಸ್ ಎಂದು ಬರೆದಿರುವ ಸ್ಟಿಕರ್ ಅಂಟಿಸಿರುವುದು ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ಭಾವಚಿತ್ರವನ್ನು ನೋಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸ್ಥಳದಲ್ಲಿ ಮೇಲೆ ಹೇಳಿದಂತಹ ವಾಹನದ ಭಾಗಗಳ ಸ್ಪಷ್ಟವಾಗಿ ಭಾವಚಿತ್ರತೆಗೆದಿರುವುದಿಲ್ಲ ಎಂದರೆ ಪ್ರತ್ಯೇಕ ಪ್ರತ್ಯೇಕವಾಗಿ ತೆಗೆದಿರುವುದಿಲ್ಲ.

7. ನಿಪಿ-4 ರಲ್ಲಿ ಬೈಕ್ ಮತ್ತು ಒಂದು ಅಟೋ ಕಾಣುತ್ತದೆ ಎಂದರೆ ರಸ್ತೆಯಲ್ಲಿ ದೂರದಿಂದ ಬರುವ ಅಟೊ ಕಾಣುತ್ತದೆ. ನಿಪಿ-2 ರಲ್ಲಿ ತಿಳಿಸಿದಂತೆ ಮೃತ ಪಟ್ಟ ವ್ಯಕ್ತಿ ಮುಡಾರಿನಿಂದ ಬಜಗೋಳಿಗೆ ಹೋಗುತ್ತಿರುವ ಬಗ್ಗೆ ನಿಪಿ-3 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ.

8. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ಯಾವುದೇ ಮಹಜುರು ತಯಾರಿಸಿರುವುದಿಲ್ಲ, ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ, ಯಾವುದೇ ಸಾಕ್ಷಿಗಳ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ, ನನಗೆ ಮೇಲಾಧಿಕಾರಿಯವರು ಮೆಮೊ ಕೊಟ್ಟಿರುವುದಿಲ್ಲ ಅದರ ಪ್ರಕಾರ ನಾನು ನಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿರುವುದಿಲ್ಲ ಎಂದರೆ ಸರಿ. ನನ್ನ ತನಿಖೆಯ ಪ್ರಕಾರ ಯಾವ ಯಾವ ವಾಹನಗಳ ನಡುವೆ ಅಪಘಾತ ಆಗಿದೆ ಎಂದು ಕಂಡುಬಂದಿರುವುದಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ